## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.*

## ಎಸ್ ಸಿ ಕೇಸ್ ನಂ.54/2020

ಪ್ರಾ.ಸಾ. 5

ಚಾ.ಸಾ. 4

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 30.01.2025**

| | |
|---|---|
| ಸಾಕ್ಷಿದಾರರ ಹೆಸರು | ಅಭಿಷೇಕ್ |
| ತಂದೆಯ ಹೆಸರು | ನಂಜುಂಡಯ್ಯ |
| ವಯಸ್ಸು | 25 ವರ್ಷ |
| ಉದ್ಯೋಗ | ಖಾಸಗಿ ಕಂಪನಿ ಕೆಲಸ |
| ವಾಸ | ವೈದ್ಯನಾಥಪುರ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಿಂದೆ ನಾನು ನೋಡಿಲ್ಲ. ಇದೇ ಮೊದಲನೇ ಬಾರಿಗೆ ನೋಡುತ್ತಿರುವುದು. ಚಾಸಾ.1 ರಿಂದ 3, 5 ರಿಂದ 8 ರವರು ನನಗೆ ಗೊತ್ತಿಲ್ಲ. ಮೃತ ರಾಕೇಶ್ ಅಲಿಯಾಸ್ ರಾಕಿಯನ್ನು ನಾನು ನೋಡಿಲ್ಲ. ಆತ ಮೃತಪಟ್ಟಿದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲ. ಆರೋಪಿತರ ವಿರುದ್ಧ ಯಾರು, ಏನು ಕೇಸು ಹಾಕಿದ್ದಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಹಾಗೂ ಮರುಹೇಳಿಕೆ ಪಡೆದುಕೊಂಡಿಲ್ಲ.

2. ಪ್ರಕರಣದ ಬಗ್ಗೆ ಬೇರೆ ಮಾಹಿತಿ ಇಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 5 ಹಾಗೂ ನಿಪಿ.5 ಅನ್ನು ಇದೇ ಮೊದಲನೇ ಬಾರಿಗೆ ನೋಡುತ್ತಿದ್ದೇನೆ. ಆರೋಪಿತರ ವಿರುದ್ಧ ಯಾರು ಏತಕ್ಕಾಗಿ ಪ್ರಕರಣ ದಾಖಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*3. 2018 ಡಿಸೆಂಬರ್ ತಿಂಗಳಿನಲ್ಲಿ ಮಧ್ಯರಾತ್ರಿ 1.00 ಗಂಟೆ ಸಮಯದಲ್ಲಿ ನಾನು, ಚಾಸಾ.2 ಹಾಗೂ 3 ರವರು ನಮ್ಮ ಊರಿಗೆ ಬಂದು 1 ನೇ ಆರೋಪಿಯ ಮನೆಯ ಬಳಿ ಹೋಗಿ ಆತನ ತಾಯಿ, ಹೆಂಡತಿಯ ಜೊತೆ ಗಲಾಟೆ ಮಾಡಿದ್ದು, ಈ ಬಗ್ಗೆ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಚಾಸಾ.2 ಹಾಗೂ ಇತರರ ವಿರುದ್ಧ ಕೇಸು ದಾಖಲಾಗಿರುತ್ತದೆ, ಅಂದಿನಿಂದ 1 ನೇ ಆರೋಪಿ ಚಾಸಾ.2 ರವರ ಮೇಲೆ ದ್ವೇಷ ಬೆಳೆಸಿಕೊಂಡಿದ್ದರು ಎಂದರೆ ಸರಿಯಲ್ಲ.*

*4. ದಿನಾಂಕ 27.06.2019 ರಂದು ಸಂಜೆ 4.00 ಗಂಟೆ ಸಮಯಕ್ಕೆ ನಾನು ಮನೆಯಲ್ಲಿ ಮಲಗಿದ್ದಾಗ ರಸ್ತೆಯಲ್ಲಿ ಕೂಗಾಡುವ ಶಬ್ಧ ಕೇಳಿಸಿದ್ದು, ನಾನು ಯಾರೋ ಕುಡಿದು ಗಲಾಟೆ ಮಾಡುತ್ತಿದ್ದಾರೆಂದು ಆಚೆ ಬರಲಿಲ್ಲ, ಕೂಗಾಡುತ್ತಿದ್ದವರ ಶಬ್ಧ ಕೇಳಲಾಗಿ ಆರೋಪಿತರು ಹಾಗೂ ನಾನು, ಚಾಸಾ.2 ಹಾಗೂ 3 ಮತ್ತು ಮೃತ ರಾಕೇಶ್ ಮಾತನಾಡುವ ಶಬ್ಧ ಕೇಳಿಸಿತು, ಎಲ್ಲರೂ ಹೊಟರು ಹೋಗಿರುತ್ತಾರೆಂದು ಮಲಗಿಕೊಂಡೆ ಎಂದರೆ ಸರಿಯಲ್ಲ.*

*5. ದಿನಾಂಕ 28.06.2019 ರಂದು ಬೆಳಗ್ಗೆ 6.00 ಗಂಟೆ ಸಮಯದಲ್ಲಿ ನಾನು ಮನೆಯಿಂದ ಹೊರಗಡೆ ಬಂದಾಗ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ರಾಕೇಶನ ಹೆಣವು ಬಿದ್ದಿದ್ದು, ಆತನ ತಲೆ, ಮುಖ, ಕತ್ತು ಭುಜ ಮುಂತಾದ ಕಡೆಯಲ್ಲಿ ತೀವ್ರ ಸ್ವರೂಪದ ಗಾಯಗಳಾಗಿ ತೀರಿಕೊಂಡಿದ್ದನು, ರಾತ್ರಿ ಆರೋಪಿತರು ಕೂಗಾಡುತ್ತಿದುದ್ದನ್ನು ನೋಡಿದರೆ ರಾಕೇಶ ಮೇಲಿನ ಹಳೆಯ ದ್ವೇಷದಿಂದ ಕೊಲೆ ಮಾಡಿರಬಹುದು ಎಂದು ಅನುಮಾನ ಇರುತ್ತದೆ ಎಂದರೆ ಸರಿಯಲ್ಲ.*

ಈ ಎಲ್ಲಾ ವಿಷಯ ಕುರಿತು ಈಗ ಓದಿ ಹೇಳಿದಂತೆ ನಿಪಿ.*12* ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

*6.* ಆರೋಪಿತರು ಮೃತನನ್ನು ಮತ್ತು ಸ್ನೇಹಿತರ ಮೇಲೆ ಹಳೆ ದ್ವೇಷದಿಂದ ಸಂಚು ರೂಪಿಸಿ ದಿನಾಂಕ *27.06.2019* ರಂದು ರಾತ್ರಿ *11.30* ಗಂಟೆ ಸಮಯದಲ್ಲಿ ರಾಕೇಶ ಹಾಗೂ ಕರಿಯ ಇಬ್ಬರೂ ಕೆಎ–*51*–ಡಬ್ಲ್ಯೂ–*1532* ಮೋಟಾರು ಬೈಕಿನಲ್ಲಿ ನಮ್ಮ ಗ್ರಾಮಕ್ಕೆ ಬಂದಿದ್ದಾಗ *7* ನೇ ಆರೋಪಿ ಈ ನನ್ನ ಮಕ್ಕಳನ್ನು ಹೊಡೆದು ಸಾಯಿಸಿ ಎಂದು ಹೇಳಿದಾಗ *1* ನೇ ಆರೋಪಿ ಹಾಗೂ ಇತರರು ಸೇರಿ ರಾಕೇಶನಿಗೆ ಲಾಂಗು, ಡ್ರ್ಯಾಗನ್, ಕಲ್ಲುಗಳಿಂದ ಹೊಡೆದು ಕೊಲೆ ಮಾಡಿ, ಕರಿಯ ಮತ್ತು ಸ್ನೇಹಿತರನ್ನು ಕೊಲೆ ಮಾಡುವ ಪ್ರಯತ್ನ ಮಾಡಿದರು ಎಂದು ಗೊತ್ತಾಯಿತು ಎಂದು ಈಗ ಓದಿ ಹೇಳಿದಂತೆ ದಿನಾಂಕ *04.07.2019* ರಂದು ಪೊಲೀಸರಿಗೆ ನಿಪಿ.*13* ರಂತೆ ಮರುಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

*7.* ಮಹಜರಿನ ಎಲ್ಲಾ ವಿಷಯ ತಿಳಿದಿದ್ದರೂ ಕೂಡ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದರೂ ಕೂಡ ಆರೋಪಿತರು ನಮ್ಮ ಊರಿನವರೇ ಆದ್ದರಿಂದ ಸದರಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.